ಯೇಟ್ಸ್‌ಗೆ ಏಕೆ ಅನ್ಯಾಯ ಮಾಡಬಾರದು ? ಮೆಡಿಕರ್ ಗ್ರಾಜುಯೇಟ್ಸ್‌ಗೆ ಪ್ರೈವೇಟ್ ಪ್ರ್ಯಾಕ್ಟೀಸ್ ಮಾಡಿಕೊಳ್ಳುವುದಕ್ಕೆ ಬೇರೆ ಒಂದು ಅವಕಾಶ ಇದೆ. ಆದರೆ ಇಂಜನಿಯರಿಂಗ್ ಗ್ರಾಜುಯೇಟ್ಸ್‌ಗೆ ಪ್ರೈವೇಟ್ ಪ್ರ್ಯಾಕ್ಟೀಸ್‌ಗೆ ಯಾವ ಅವಕಾಶವೂ ಇಲ್ಲ. ಅಂಥಾದ್ದರಲ್ಲಿ ಇವರ ಸಂಬಳ ಸಾರಿಗೆ ಗಳನ್ನು ಏಕೆ ಈಕ್ವಲೈಸ್ ಮಾಡಲಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಸಂಬಳ ಸಾರಿಗೆಗಳನ್ನು ನಾವು ಪುನರ್ವಿಮರ್ಶೆ ಮಾಡುವ ಮುನ್ನ ಅವರು ಎಷ್ಟು ವರ್ಷಗಳಿಂದ ಓದುತ್ತಿದ್ದಾರೆ, ಅದಕ್ಕೆ ಏನು ಖರ್ಚಾಗುತ್ತದೆ, ಎಷ್ಟರಮಟ್ಟಿಗೆ ಅವರ ಬೇಡಿಕೆ ಇದೆ, ಸುತ್ತುಮುತ್ತಲಿರುವ ಪಕ್ಕದ ರಾಜ್ಯಗಳವರು ಏನು ಸಂಬಳ ಸಾರಿಗೆಗಳನ್ನು ಈ ದರ್ಜೆಯವರಿಗೆ ಕೊಡುತ್ತಿದ್ದಾರೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಿರ್ಣಯ ಮಾಡಿದ್ದೇವೆ. ಮದ್ರಾಸ್‌ನಲ್ಲ ಇಂತಹವರಿಗೆ ಏನು ಸಂಬಳ ಸಾರಿಗೆ ಇದೆಯೋ ಅದನ್ನೇ ಇಲ್ಲಿಯೂ ಒಪ್ಪಿಕೊಳ್ಳಬೇಕು ಎಂದು ಸರ್ವಸಾಮಾನ್ಯವಾಗಿ ಸರ್ಕಾರದ ನೀತಿಯಾಗಿದೆ. ಅದಕ್ಕೂ ಹೆಚ್ಚು ಸಂಬಳ ಜೂನಿಯರ್ ಇಂಜಿನಿಯರುಗಳಿಗೆ ಕೊಡಬೇಕು ಎಂದು ಒಂದು ದೊಡ್ಡ ಮನಸ್ಸು ಮಾಡಿ ಸರ್ಕಾರ ಈರೀತಿ ಮಾಡಿದೆ. ಆದ್ದರಿಂದ ನಾವು ಈಗ ಏನು ಅವರಿಗೆ ಸಂಬಳಸಾರಿಗೆಯನ್ನು ಕೊಟ್ಟಿದ್ದೇವೆಯೋ ಅದು ಸಂಪೂರ್ಣವಾಗಿ ಅವರಿಗೆ ಸಮಾಧಾನವಾಗಿರಬಹುದು ಎಂದು ನನಗನ್ನಿಸುತ್ತದೆ.

9-30 A.M.

ಮೆಡಿಕರ್ ಗ್ರಾಜುಯೇಟುಗಳಿಗೆ ಕೊಟ್ಟಹ್ಗೇ ಸಂಬಳ ಸಾರಿಗೆಗಳನ್ನು ಜೂನಿಯರ್ ಇಂಜಿನಿಯರುಗಳಿಗೂ ಕೊಡಬೇಕು ಎಂದರೆ ಮೆಡಿಕರ್ ಗ್ರಾಜುಯೇಟುಗಳ ಪೇ ಸ್ಕೇಲ್ ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳ ಪೇ ಸ್ಕೇಲ್ ಎರಡೂ ಒಂದೇ ಆಗಿದೆ. ಎಂದರೆ 300 ರೂಪಾಯಿಗಳಿಂದ 700 ರೂಪಾಯಿಗಳವರೆಗೆ ಇದೆ. ಆದ್ದರಿಂದ ಜೂನಿಯರ್ ಇಂಜಿನಿಯರುಗಳಿಗೆ ಅಸಿಸ್ಟೆಂಟ್ ಇಂಜನಿಯರುಗಳ ಸಂಬಳವನ್ನು ಕೊಡಬೇಕಾಗುತ್ತದೆ, ಅಸಿಸ್ಟೆಂಟ್ ಇಂಜಿನಿಯರುಗಳಿಗೆ ಎಗ್ಜಿಕ್ಯೂಟೀವ್ ಇಂಜಿನಿಯರುಗಳ ಪೇ ಸ್ಕೇಲ್ಸ್ ಕೊಡಬೇಕಾಗುತ್ತದೆ, ಎಗ್ಜಿಕ್ಯೂಟೀವ್ ಇಂಜಿನಿಯರುಗಳಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ ಪೇ ಸ್ಕೇಲ್ ಕೊಡಬೇಕಾಗುತ್ತದೆ. ಈ ರೀತಿ ಸಂಬಳವನ್ನು ಕೊಡುವುದಕ್ಕೆ ಸರ್ಕಾರದವರಿಗೆ ಶಕ್ತಿ ಇದೆಯೋ ಅಥವಾ ಇಲ್ಲವೋ ಎಂಬುದನ್ನೂ ಕೂಡ ನಾವು ನೋಡಬೇಕಾಗುತ್ತದೆ.

———

Conversion of Roads into State Fund Roads in Ron Taluk.

*Q.—46. **Sri A. J. DODDAMETI** (Ron).—

Will the Minister for Public Works be pleased to state :—

(*a*) whether they are aware of the longstanding demand for converting the following important roads in Ron Taluk, Dharwar District, into State Fund Roads, *viz.*,

(i) Rajura-Belura Road (15 miles) ;

(ii) Road from Ron to Malavada *via* Mudenagudi, Hulhura, Asuti, Karamudi (14 miles) ;

(*b*) if so, the action taken by Government in this behalf ?

A.—**Sri VEERENDRA PATIL** (Minister for Public Works).—

(*a*) Yes.

(*b*) The question of taking over these roads to Public Works Department is under consideration.

ಶ್ರೀ ಎ. ಜೆ. ಘೊಡ್ಡಮೇಟಿ.—ನನ್ನ ಪ್ರಶ್ನೆಯಲ್ಲಿರತಕ್ಕ ಮಾರ್ಗಗಳನ್ನು ರಾಜ್ಯ ನಿಧಿ ರಸ್ತೆಗಳಾಗಿ ಪರಿವರ್ತನೆ ಮಾಡುತ್ತೀವೆಂದು ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಒಂದು ಸಾರ್ವಜನಿಕ ಸಭೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಪ್ರಕಾರ ಬಿಜಾಪುರ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹಾದುಹೋಗತಕ್ಕ ಮುಖ್ಯ ರಸ್ತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮತ್ತು ಮಧ್ಯ ಮಾರ್ಗದಲ್ಲಿ 8-10 ಗ್ರಾಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಆ ರಸ್ತೆಗಳನ್ನು ರಾಜ್ಯ ನಿಧಿ ರಸ್ತೆಗಳಾಗಿ ಪರಿವರ್ತನೆ ಮಾಡಿ ಅವುಗಳನ್ನು ಲೋಕೋಪಯೋಗಿ ಶಾಖೆಗೆ ಶಕ್ಯವಿದ್ದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ತಾವು ಅಪೇಕ್ಷೆ ಮಾಡುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ನಾನು ಮೊನ್ನೆ ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಹೋದಾಗ ಅಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ನಾನು ಮಾತನಾಡುತ್ತಾ, ಇಷ್ಟರಲ್ಲೇ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿಕೊಳ್ಳತಕ್ಕ ಕೆಲವು ರಸ್ತೆಗಳ ಪಟ್ಟಿಯನ್ನು ನಾವು ತಯಾರು ಮಾಡುತ್ತೇವೆ, ಆ ಪಟ್ಟಿಯನ್ನು ತಯಾರು ಮಾಡುವಾಗ ಕೆಲವು ಮುಖ್ಯವಾದ ರಸ್ತೆಗಳನ್ನು ಅದರಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಆ ಪಟ್ಟಿಯನ್ನು ತಯಾರು ಮಾಡುವಾಗ ಎಲ್ಲಾ ರಸ್ತೆಗಳನ್ನೂ ಅದರಲ್ಲಿ ಸೇರಿಸಿಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಕೆಲವು ಮುಖ್ಯವಾದ ರಸ್ತೆಗಳು, ಅದರಲ್ಲೂ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಹೇಳಿದಂತಹ ರಸ್ತೆಗಳನ್ನು ಶಕ್ಯವಿದ್ದಷ್ಟು ಸೇರಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಪಾಮಿ, ಈಗ ಮಾನ್ಯ ಮಂತ್ರಿಗಳು ಆ ರೀತಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಿದ್ದೇವೆ ಎಂದು ಹೇಳಿದರು, ಯಾವ ಸಾರ್ವಜನಿಕ ಸಭೆಯಲ್ಲಿ ಅವರು ಕತ್ತು ಮುರಿಯುವ ಹಾಗೆ ಹೂವಿನ ಹಾರವನ್ನು ಹಾಕಿಸಿಕೊಂಡರೋ ಆ ಏರಿಯಾಕ್ಕೆ ಮಾತ್ರ ಮಂತ್ರಿಗಳು ಹೇಳಿದ್ದು ಅನ್ವಯವಾಗುತ್ತದೆಯೋ ಅಥವಾ ರಾಜ್ಯದ ಎಲ್ಲಾ ಭಾಗಗಳಿಗೂ ಅದು ಅನ್ವಯವಾಗುತ್ತದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ನಾನು ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿ ಆದಮೇಲೆ ಎರಡುಸಲ ಅಂತಹ ಪಟ್ಟಿಯನ್ನ ತಯಾರು ಮಾಡಿದೆ. ಯಾವ ಯಾವ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಆ ಪಟ್ಟಿಯಲ್ಲಿ ನಮೂದು ಮಾಡಿದೆ ಎಂಬುದನ್ನು ಮಾನ್ಯ ಸದಸ್ಯರು ಓದಿದರೆ ಹೂವಿನ ಹಾರವನ್ನು ಹಾಕಿಸಿಕೊಂಡ ಪ್ರದೇಶದ ರಸ್ತೆಗಳನ್ನು ಮಾತ್ರ ಅದರಲ್ಲಿ ಸೇರಿಸಿದೆಯೇ ಅಥವಾ ರಾಜ್ಯದ ಎಲ್ಲಾಕಡೆಯ ರಸ್ತೆಗಳನ್ನೂ ಅದರಲ್ಲಿ ಸೇರಿಸಿದೆಯೇ ಎಂಬುದು ಗೊತ್ತಾಗುತ್ತದೆ.

Mr. DEPUTY SPEAKER.—Question Hour is over.

THE REPORTS OF THE MYSORE PUBLIC SERVICE COMMISSION FOR 1963-64 and 1964-65

Motion to consider.

Sri G. V. GOWDA (Palya).—I beg to move :

"That the Reports of the Mysore Public Service Commission for the years 1963-64 and 1964-65 be taken into consideration"

Mr. DEPUTY SPEAKER.—Motion moved :

"That the Reports of the Mysore Public Service Commission for the years 1963-64 and 1964-65 be taken into consideration."